# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 160/23

**ಸಾಕ್ಷಿಯನ್ನು ದಿಃ 24.06.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಅಯಾಜ್ ಅಹಮದ್ | ಸಿ.ಡಬ್ಲ್ಯೂಃ **4** | ಪಿ.ಡಬ್ಲ್ಯೂಃ **3** |
| ತಂದೆಯ ಹೆಸರು | ಪರ್ವೇಜ್ ಅಹಮದ್ | | |
| ವಯಸ್ಸು | 37 ವರ್ಷ | | |
| ಕೆಲಸ | ಕಾರ್ ಚಾಲಕ | | |
| ವಾಸಸ್ಥಳ | ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾ-1 ರವರ ಪರಿಚಯ ಇಲ್ಲ. ಚಾಸಾ-5 ರವರ ಪರಿಚಯ ಇದೆ. 1 ನೇ ಆರೋಪಿ ಪರಿಚಯ ಇದೆ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಆರೋಪಿ ತೋರಿಸಿದ ಕೃತ್ಯ ಸ್ಥಳ ಮಹಜರ್ ಆಗಿದ್ದು ಅದನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಆ ಸಮಯ ಪೊಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಿ.ಡಿ ಇಲ್ಲದ ಕಾರಣ ಅವುಗಳನ್ನು ನಿಶಾನೆಗೊಳಪಡಿಸಿಲ್ಲ.

2. ದಿಃ 20.01.2023 ರಂದು ಬಸ್ ಸ್ಟಾಂಡ್ ಎದುರುಗಡೆ ರೇಣುಕಾ ಬಾರ್ ಗೆ ಕಳ್ಳತನಕ್ಕೆ ಸಂಬಂಧಪಟ್ಟಂತೆ ಪೊಲೀಸರು ಮಹಜರ್ ಮಾಡಲು ಬಂದಿದ್ದು ನಮ್ಮನ್ನು ಪಂಚರಾಗಿ ಬರಲು ಪೊಲೀಸರು ಕೋರಿದ ಮೇರೆಗೆ, ನಾವು ಒಪ್ಪಿ ಹಾಜರಿದ್ದು, ಪೊಲೀಸರು ಮಧ್ಯಾಹ್ನ 3.15- 4.15 ಗಂಟೆವರೆಗೆ ಸದರಿ ಮಹಜರ್ ಮಾಡಿದ್ದು, ಆ ಸಮಯ ನಾನು ಹಾಗೂ ಚಾಸಾ-5 ರವರು, ಪೊಲೀಸರು ಹಾಗೂ 1,2 ನೇ ಆರೋಪಿತರು ಇದ್ದು ಸ್ಥಳವನ್ನು 1,2 ನೇ ಆರೋಪಿತರು ತೋರಿಸಿಕೊಟ್ಟಿರುತ್ತಾರೆ. ಸದರಿ ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ. ಆ ಸಮಯ ಪೊಲೀಸರು ಎರಡು ಭಾವಚಿತ್ರಗಳನ್ನು ತೆಗೆದಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಎನ್ ಪಿ ಅವರಿಂದ–**

3. ಈ ಪ್ರಕರಣದ ಸಂಬಂಧ ನನಗೆ ಪೊಲೀಸರು ಯಾವುದೇ ನೋಟೀಸ್ ನೀಡಿಲ್ಲ. ನನ್ನ ಹೆಸರು ಅಯಾಜ್ ಅಹಮದ್ ಹಾಗೂ ನನ್ನ ತಂದೆಯ ಹೆಸರು ಪರ್ವಾಜ್ ಅಹಮದ್. ನಯಾಜ್ ಅಹಮದ್ ಎಂದರೆ ನಾನಲ್ಲ ಎಂದರೆ ಸರಿ. ನಿಪಿ.3 ರ ಕ್ರಮ ಸಂಖ್ಯೆ 12 ರಲ್ಲಿ ಅಯಾಜ್ ಅಹಮದ್ ಎಂದಿರುವ ಸಹಿ ನನ್ನದೇ ಆಗಿದೆ ಆದರೆ ಆವರಣದಲ್ಲಿ ಕಾಣಿಸಿರುವ ನಯಾಜ್ ಅಹಮದ್ ಎಂದರೆ ನಾನಲ್ಲ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಹಾಗೂ ತಲೆ ಮರೆಸಿಕೊಂಡಿರುವ 2 ನೇ ಆರೋಪಿ ನನಗೆ ಗೊತ್ತು ಎಂದು ಹೇಳಿದ್ದು, ಅವರು ಏನೂ ಕೆಲಸ ಮಾಡುತ್ತಾರೆ ಅವರ ವಿಳಾಸ ಹಾಗೂ ಅವರ ತಂದೆ ಹೆಸರು ನನಗೆ ಗೊತ್ತಿಲ್ಲ. ನಿಪಿ.3 ಕ್ಕೆ ನಾನು ಪೊಲೀಸರ ಹೇಳಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ.3 ರ ಅಮಾನತ್ತು ಮಹಜರ್ ನಲ್ಲಿರುವ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಸಂಬಂಧ ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಪೊಲೀಸರ ಹೇಳಿಕೆ ಮೇರೆಗೆ ನಾನು ಈ ದಿನ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇದೇ ಮೊದಲ ಬಾರಿ ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಸ್ಥಳದಲ್ಲಿ ನೋಡಿರುತ್ತೇನೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ. , ಹುಣಸೂರು.